ಯಶವಂತಪುರ: ಜಿಬಿಎ ಚುನಾವಣೆ ಆ.30 ರ ಒಳಗೆ ನಡೆಸುವಂತೆ ಸುಪ್ರೀಂ ಕೋರ್ಟ್ ರಾಜ್ಯ ಸರ್ಕಾರಕ್ಕೆ ಸ್ಪಷ್ಟ ಗಡುವು ನೀಡಿದ ಬೆನ್ನಲ್ಲೇ ಶಿವನ ಪಾಳ್ಯ ವಾರ್ಡ್ ಸಂಖ್ಯೆ 19ರ ಸ್ಪರ್ಧಾಕಾಂಕ್ಷಿ ಸವಿತಾ ಮಹೇಶ್ ಮನೆಮನೆ ಭೇಟಿ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ. ರಾಮೋ ಹಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ಜಿ.ಮಹೇಶ್, ಶಿವನ ಪಾಳ್ಯ ವಾರ್ಡ್ ಅಧ್ಯಕ್ಷ ಕೆ.ವೈ.ಕೃಷ್ಣ, ಮುಖಂಡರಾದ ಅಮಾನುಲ್ಲಾ, ಸಲ್ಮಾನ್ ಸೇರಿದಂತೆ ಸ್ಥಳೀಯರು ಸಾಥ್ ನೀಡಿದರು.

ಜೋಕಿಮ್ ಡಿ'ಸಿಲ್ವಾಗೆ ಪಿಎಚ್.ಡಿ

ಉದಯಕಾಲ ನ್ಯೂಸ್, ರಾಮನಗರ: ಬೆಂಗಳೂರು ದಕ್ಷಿಣ ಜಿಲ್ಲೆ ಕನಕಪುರ ತಾಲ್ಲೂಕಿನ ಕೋಡಿಹಳ್ಳಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಇಂಗ್ಲಿಷ್ ಸಹಾಯಕ ಪ್ರಾಧ್ಯಾಪಕರಾದ

ಜೋಕಿಮ್ ಡಿ'ಸಿಲ್ವಾ ಅವರಿಗೆ ಮಂಗಳೂರು ವಿಶ್ವವಿದ್ಯಾಲಯವು ಪಿಎಚ್.ಡಿ ಪದವಿ ನೀಡಿದೆ. ಜೋಕಿಮ್ ಡಿ'ಸಿಲ್ವಾ ಅವರು ಕಳೆದ ಏಪ್ರಿಲ್ 30, 2026 ರ ಗುರುವಾರ ಮಂಗಳೂರು ವಿಶ್ವವಿದ್ಯಾಲಯದ ಇಂಗ್ಲಿಷ್ ವಿಭಾಗದಲ್ಲಿ "An Ecocritical Reading of the Select Novels of Richard Powers" ಎಂಬ ಶೀರ್ಷಿಕೆಯ ತಮ್ಮ ಪಿಎಚ್.ಡಿ ಪ್ರಬಂಧವನ್ನು ಯಶಸ್ವಿಯಾಗಿ ಮಂಡಿಸಿದ್ದರು.

ನಂದಕುಮಾರ್‌ಗೆ ಸನ್ಮಾನ

ಉದಯಕಾಲ ನ್ಯೂಸ್, ದೊಡ್ಡಬಳ್ಳಾಪುರ: ಪದವಿ ಪೂರ್ವ ಶಿಕ್ಷಣ ಇಲಾಖೆಯ ವಿವಿಧ ಕಾಲೇಜುಗಳಲ್ಲಿ ಸೂಪರ್ ಡೆಂಟ್ ಆಗಿ ಕಳೆದ 32 ವರ್ಷಗಳಿಂದ ಸೇವೆ ಸಲ್ಲಿಸಿ ಇಂದು ನಿವೃತ್ತರಾದ ಸ್ನೇಹಮಯಿ,ಅಜಾತಶತ್ರು, ಸದಾ ಹಸನ್ಮುಖಿಯಾದ ನಂದಕುಮಾರ್ ರವರನ್ನು ಲಾವಣ್ಯ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಪರವಾಗಿ ಸರ್ಕಾರಿ ಪದವಿ ಪೂರ್ವ ಕಾಲೇಜು ಕೊನಘಟ್ಟದಲ್ಲಿ ನಡೆದ ಸನ್ಮಾನ ಕಾರ್ಯಕ್ರಮದಲ್ಲಿ ಅಭಿನಂದನೆಗಳನ್ನು ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಲಾವಣ್ಯ ಸಂಯುಕ್ತ ಪದವಿ ಪೂರ್ವ ಮತ್ತು ಪದವಿ ಕಾಲೇಜು ಪ್ರಾಂಶುಪಾಲರಾದ ಎಂ. ಸಿ ಮಂಜುನಾಥ್ ಹಿರಿಯ ಉಪನ್ಯಾಸಕರಾದ ಟಿ. ಆರ್. ಶ್ರೀರಾಮೇಗೌಡ,ಮಹಾದೇವ್ ಹಾಗೂ ಕಾಲೇಜಿನ ಸಿಬ್ಬಂದಿ ವರ್ಗದವರು ಬಾಗವಹಿಸಿದ್ದರು.

ಕೊಂಬಿನಕಲ್ಲು ಅರಣ್ಯ ವ್ಯಾಪ್ತಿಯ ಮೆಂಗಹಳ್ಳಿಯಲ್ಲಿ ಘಟನೆ | ವನ್ಯಜೀವಿಗಳ ಸುರಕ್ಷತೆಗೆ ಸಿಗಬೇಕಿದೆ ಆದ್ಯತೆ

ಬೀದಿ ನಾಯಿಗಳ ದಾಳಿಗೆ ಚುಕ್ಕೆ ಜಿಂಕೆ ಬಲಿ

ಉದಯಕಾಲ ನ್ಯೂಸ್, ಚನ್ನಪಟ್ಟಣ: ತಾಲೂಕಿನ ವಿರುಪಾಕ್ಷಿಪುರ ಹೋಬಳಿ ಸುಳ್ಳೇರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೊಂಬಿನಕಲ್ಲು ರಾಜ್ಯ ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಿರುವ ಗಡಿಗ್ರಾಮ ಮೆಂಗಹಳ್ಳಿಯಲ್ಲಿ ಬೀದಿ ನಾಯಿಗಳ ದಾಳಿಗೆ ಸಿಲುಕಿ ಗಂಭೀರವಾಗಿ ಗಾಯಗೊಂಡಿದ್ದ ಚುಕ್ಕೆ ಜಿಂಕೆಯೊಂದು ಚಿಕಿತ್ಸೆ ದೊರಕುವ ಮುನ್ನವೇ ಸಾವನ್ನಪ್ಪಿದ ಘಟನೆ ಶನಿವಾರ ಬೆಳಗ್ಗೆ ಸಂಭವಿಸಿದೆ.

ಅರಣ್ಯ ಪ್ರದೇಶದಿಂದ ಆಹಾರ ಮತ್ತು ನೀರು ಅರಸುತ್ತಾ ಗ್ರಾಮ ಪ್ರದೇಶಕ್ಕೆ ಬಂದಿದ್ದ ಅಂದಾಜು ಏಳು ವರ್ಷದ ಗಂಡು ಚುಕ್ಕೆ ಜಿಂಕೆಯನ್ನು ಬೀದಿ ನಾಯಿಗಳ ಗುಂಪು ಅಟ್ಟಾಡಿಸಿ ದಾಳಿ ನಡೆಸಿದೆ. ದಾಳಿಯ ಪರಿಣಾಮ ದೇಹದ ವಿವಿಧ ಭಾಗಗಳಲ್ಲಿ ಗಾಯಗೊಂಡು ಜಿಂಕೆ ತೀವ್ರ ರಕ್ತಸ್ರಾವದಿಂದ ನರಳಾಡುತ್ತಿದ್ದ ವೇಳೆ ಸ್ಥಳೀಯ ಗ್ರಾಮಸ್ಥರ ಗಮನಕ್ಕೆ ಬಂದಿದೆ.

ಮೆಂಗಹಳ್ಳಿ ಗ್ರಾಮದ ನಿವಾಸಿ ಪುಟ್ಟಸ್ವಾಮಿ ಅವರ ಹಳೆಯ ಮನೆಯ ಸಮೀಪ ಜಿಂಕೆ ಗಾಯಗೊಂಡ ಸ್ಥಿತಿಯಲ್ಲಿ ಕಂಡುಬಂದಿದ್ದು, ತಕ್ಷಣ ಗ್ರಾಮಸ್ಥರು ಮಾನವೀಯತೆ ಮೆರೆದಿದ್ದಾರೆ. ನಾಯಿಗಳಿಂದ ಜಿಂಕೆಯನ್ನು ರಕ್ಷಿಸಿಸುರಕ್ಷಿತಸ್ಥಳಕ್ಕೆಸ್ಥಳಾಂತರಿಸಿದಗ್ರಾಮಸ್ಥರು ಕೂಡಲೇ ಅರಣ್ಯ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಮಾಹಿತಿ ನೀಡಿದ್ದಾರೆ.

ಮಾಹಿತಿ ಪಡೆದ ಅರಣ್ಯ ಇಲಾಖೆ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಜಿಂಕೆಯನ್ನು ವಶಕ್ಕೆ ಪಡೆದು ಚಿಕಿತ್ಸೆಗಾಗಿ ಸಾಗಿಸಲು ಮುಂದಾಗಿದ್ದಾರೆ. ಆದರೆ ಗಾಯಗಳ ತೀವ್ರತೆ ಮತ್ತು ಅತಿಯಾದ ರಕ್ತಸ್ರಾವದಿಂದಾಗಿ ಜಿಂಕೆ ಮಾರ್ಗಮಧ್ಯೆಯೇ ಸಾವನ್ನಪ್ಪಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಘಟನೆ ಮೆಂಗಹಳ್ಳಿ ಗ್ರಾಮದ ಚಕ್ಕಬಂದಿ ಪ್ರದೇಶದಲ್ಲಿ, ಪೂರ್ವಕ್ಕೆ ಮರಿಸ್ವಾಮಿ ಅವರ ಮನೆ, ಪಶ್ಚಿಮಕ್ಕೆ ಪುಟ್ಟಸ್ವಾಮಿ ಅವರ ಮನೆ, ಉತ್ತರಕ್ಕೆ ರಸ್ತೆ ಹಾಗೂ ದಕ್ಷಿಣಕ್ಕೆ ಕಮಲಮ್ಮ ಅವರ ಮನೆ ಇರುವ ಪ್ರದೇಶದ ಬಳಿ ಸಂಭವಿಸಿದೆ ಎಂದು ತಿಳಿದುಬಂದಿದೆ.

ಸ್ಥಳೀಯರ ಪ್ರಕಾರ, ಕಳೆದ ಕೆಲವು ವರ್ಷಗಳಿಂದ ಅರಣ್ಯ ಪ್ರದೇಶಗಳಿಗೆ ಹೊಂದಿಕೊಂಡಿರುವ ಗ್ರಾಮಗಳಲ್ಲಿ ವನ್ಯಜೀವಿಗಳು ಆಹಾರ ಮತ್ತು ನೀರಿನ ಹುಡುಕಾಟದಲ್ಲಿ ಆಗಾಗ್ಗೆ ನುಗ್ಗುತ್ತಿದ್ದು, ಬೀದಿ ನಾಯಿಗಳ ಹಾವಳಿ ಹೆಚ್ಚುತ್ತಿರುವುದರಿಂದ ಜಿಂಕೆ, ಮೊಲ ಸೇರಿದಂತೆ ಹಲವು ವನ್ಯಜೀವಿಗಳಿಗೆ ಅಪಾಯ ಉಂಟಾಗುತ್ತಿದೆ. ಈ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಹಾಗೂ ಸ್ಥಳೀಯ ಆಡಳಿತವು ಬೀದಿ ನಾಯಿಗಳ ನಿಯಂತ್ರಣ ಮತ್ತು ವನ್ಯಜೀವಿಗಳ ಸಂರಕ್ಷಣೆಗೆ ವಿಶೇಷ ಕ್ರಮ ಕೈಗೊಳ್ಳಬೇಕೆಂಬ ಒತ್ತಾಯ ಕೇಳಿಬಂದಿದೆ.

ಅರಣ್ಯ ಇಲಾಖೆ ಅಧಿಕಾರಿಗಳು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ನಿಯಮಾನುಸಾರ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ವನ್ಯಜೀವಿ ಸಂರಕ್ಷಣೆಗೆ ಎಚ್ಚರಿಕೆಯ ಗಂಟೆ: ಮೆಂಗಹಳ್ಳಿಯಲ್ಲಿ ನಡೆದ ಈ ದುರ್ಘಟನೆ ಅರಣ್ಯ ಮತ್ತು ಗ್ರಾಮೀಣ ಪ್ರದೇಶಗಳ ನಡುವಿನ ಸಂಘರ್ಷದ ಮತ್ತೊಂದು ಉದಾಹರಣೆಯಾಗಿದೆ. ಅರಣ್ಯಗಳಿಂದ ಹೊರಬರುವ ವನ್ಯಜೀವಿಗಳ ಸುರಕ್ಷತೆ ಹಾಗೂ ಬೀದಿ ನಾಯಿಗಳ ನಿಯಂತ್ರಣಕ್ಕೆ ಸಮನ್ವಯಿತ ಯೋಜನೆ ರೂಪಿಸುವ ಅಗತ್ಯವನ್ನು ಈ ಘಟನೆ ಮತ್ತೊಮ್ಮೆ ಮನವರಿಕೆ ಮಾಡಿದೆ.

ಜೆಡಿಎಸ್ ಪದಾಧಿಕಾರಿಗಳ ಪದಗ್ರಹಣ

ಉದಯಕಾಲ ನ್ಯೂಸ್, ದೇವನಹಳ್ಳಿ: ಮುಂಬರುವ ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆಗಳನ್ನು ಸಮರ್ಥವಾಗಿ ಎದುರಿಸಿ, ಜೆಡಿಎಸ್ ಪಕ್ಷವನ್ನು ತಳಮಟ್ಟದಿಂದ ಬಲಪಡಿಸಲು ಕಾರ್ಯಕರ್ತರು ಇಂದಿನಿಂದಲೇ ಸಜ್ಜಾಗಬೇಕು ಎಂದು ದೇವನಹಳ್ಳಿ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ನಿಸರ್ಗ ನಾರಾಯಣಸ್ವಾಮಿ ತಿಳಿಸಿದರು.

ದೇವನಹಳ್ಳಿ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಧ್ಯಕ್ಷ ಎಸ್. ಮಹೇಶ್ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲಾಧ್ಯಕ್ಷ ಕೆ.ವಿ. ಮಂಜುನಾಥ್ ಅವರ ನೇತೃತ್ವದಲ್ಲಿ ಆಯೋಜಿಸಲಾಗಿದ್ದ ನೂತನ ಎಸ್.ಸಿ ಘಟಕದ ಪದಾಧಿಕಾರಿಗಳ ನೇಮಕಾತಿ ಪತ್ರ ವಿತರಣಾ ಸಮಾರಂಭದಲ್ಲಿ ಅವರು ಮಾತನಾಡಿದರು.

?ಬೆಂಗಳೂರು ಗ್ರಾಮಾಂತರ ಜಿಲ್ಲಾ ಜೆಡಿಎಸ್ ಎಸ್.ಸಿ ಘಟಕದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ದೊಡ್ಡಬಳ್ಳಾಪುರ ತಾಲೂಕಿನ ಬಚ್ಚಹಳ್ಳಿಯ ನಾಗರಾಜು ಹಾಗೂ ದೇವನಹಳ್ಳಿ ತಾಲೂಕು ಎಸ್.ಸಿ ಘಟಕದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಜನತಾ ಕಾಲೋನಿಯ ರಾಮಣ್ಣ ಅವರಿಗೆ ಇದೇ ಸಂದರ್ಭದಲ್ಲಿ ಅಧಿಕೃತ ನೇಮಕಾತಿ ಪತ್ರ ನೀಡಿ ಅಭಿನಂದಿಸಲಾಯಿತು.

ಮಾಜಿ ಶಾಸಕ ನಿಸರ್ಗ ನಾರಾಯಣಸ್ವಾಮಿ ಅವರು ಮಾತನಾಡಿ, ಪರಿಶಿಷ್ಟ ಜಾತಿಯ ಎಲ್ಲಾ ನೂರೊಂದು ಸಮಾಜದ ಮುಖಂಡರು ಒಟ್ಟಾಗಿ ಸೇರಿ ಅತ್ಯಂತ ಅಚ್ಚುಕಟ್ಟಾಗಿ ಈ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆಯನ್ನು ನಡೆಸಿದ್ದಾರೆ. ಮುಂದಿನ ದಿನಗಳಲ್ಲಿ ಕುಮಾರಣ್ಣನವರು ರಾಜ್ಯದ



ಮುಖ್ಯಮಂತ್ರಿಯಾಗಬೇಕು ಮತ್ತು ದೇವನಹಳ್ಳಿ ಕ್ಷೇತ್ರದಲ್ಲಿ ಜೆಡಿಎಸ್ ಪಕ್ಷ ಭವ್ಯ ಜಯ ಸಾಧಿಸಬೇಕು. ಇದಕ್ಕಾಗಿ ನೂತನ ಪದಾಧಿಕಾರಿಗಳು ಹಾಗೂ ಮೂಲ ಸಂಸ್ಥೆಯ ಮುಖಂಡರು ಹಗಲು-ರಾತ್ರಿ ಶ್ರಮಿಸಿ, ಕಾರ್ಯಕರ್ತರ ವಿಶ್ವಾಸ ಗಳಿಸಿ ಪಕ್ಷ ಕಟ್ಟಬೇಕು ಎಮದು ಕರೆನೀಡಿದರು.

ಬೆಂಗಳೂರು ಗ್ರಾಮಾಂತರ ಜಿಲ್ಲಾಧ್ಯಕ್ಷ ಕೆ.ವಿ. ಮಂಜುನಾಥ್ ಮಾತನಾಡಿ, ತಾಲೂಕಿನಲ್ಲಿ ಎಸ್.ಸಿ ಘಟಕದ ಪುನರ್ರಚನೆಗೆ ಕರೆ ನೀಡಿದಾಗ ಎಲ್ಲಾ ಹಿರಿಯ ಮುಖಂಡರು ಸಕಾರಾತ್ಮಕವಾಗಿ ಸ್ಪಂದಿಸಿದರು. ತಾಲೂಕು ಘಟಕಕ್ಕೆ ಜನತಾ ಕಲೋನಿ ರಾಮಣ್ಣ ಹಾಗೂ ಜಿಲ್ಲಾ ಘಟಕಕ್ಕೆ ದೊಡ್ಡಬಳ್ಳಾಪುರ ಮತ್ತು ತೂಬಗೆರೆ ಹೋಬಳಿಯ ಕಾರ್ಯಕರ್ತರ ಬೆಂಬಲದೊಂದಿಗೆ ವಿದ್ಯಾವಂತರಾದ ಬಚ್ಚಹಳ್ಳಿ ನಾಗರಾಜ್ ಅವರನ್ನು ಅತ್ಯಂತ ಉತ್ಸಾಹದಿಂದ ಆಯ್ಕೆ ಮಾಡಲಾಗಿದೆ. ಇದು ಪಕ್ಷಕ್ಕೆ ಆನೆಬಲ ತಂದಿದೆ ಎಂದರು.

ನೂತನ ಪದಾಧಿಕಾರಿಗಳು: ಕಾರ್ಯಾಧ್ಯಕ್ಷರು: ಶಿವಾನಂದ. ಪ್ರಧಾನ ಕಾರ್ಯದರ್ಶಿ: ತಿರುಮಲೇಶ್ ಸಿ. ಕಾರ್ಯದರ್ಶಿ: ಮೂರ್ತಿ ಡಿ.ಟಿ.ಹಿರಿಯ ಉಪಾಧ್ಯಕ್ಷರುಗಳು: ಚಂದ್ರು, ನಾಗರಾಜು, ಮಾರಪ್ಪ, ಹರೀಶ್ ನಾಯಕ್, ಸಿದ್ದಪ್ಪ, ನಾರಾಯಣಸ್ವಾಮಿ, ಮೋಹನ್, ಮುನಿಕೃಷ್ಣ. ಉಪಾಧ್ಯಕ್ಷರುಗಳು: ನರಸಿಂಹಮೂರ್ತಿ, ಜನಕಮಣಿ, ನರಸಿಂಹಯ್ಯ (ಬಾಬು), ಭರತ್, ಚನ್ನಕೃಷ್ಣ, ಶ್ರೀನಿವಾಸ್, ಡಿ.ಎಂ.ನಾಗರಾಜು, ನಾಗೇಶ್. ಸಂಘಟನಾ ಕಾರ್ಯದರ್ಶಿಗಳು: ಮುರಳೀಧರ್, ನಾರಾಯಣ (ಅಪ್ಪಿ), ಮಂಜುನಾಥ, ಸಂತೋಷ್, ವೆಂಕಟೇಶ್, ರಾಜಶೇಖರ್, ಕಿಶೋರ್, ಮಧು, ಚಂದ್ರು, ಸತೀಶ್, ಮುನಿರಾಜು, ಸೋಮಶೇಖರ್, ಮಹೇಶ್.

ಸದಸ್ಯರುಗಳು: ವೆಂಕಟೇಶ್, ನಾಗರಾಜು, ನಾರಾಯಣಸ್ವಾಮಿ, ಹರೀಶ್, ಮುನಿಚಿನ್ನಪ್ಪ, ಶ್ರೀನಿವಾಸ್, ಕಾಟಪ್ಪ, ಮಂಜುನಾಥ್, ಮುನಿತಿಮ್ಮರಾಯಪ್ಪ, ರಮೇಶ್.

ನ್ಯಾಯಾಧೀಶರ ಮನೆಗೆ ನುಗ್ಗಿದ ಕೇರೆ ಹಾವು ಸಂರಕ್ಷಣೆ

ಉದಯಕಾಲ ನ್ಯೂಸ್, ರಾಮನಗರ: ನ್ಯಾಯಾಧೀಶರ ಮನೆ ಒಳಗೆ ನುಗ್ಗಿದ್ದ ಕೇರೆ ಹಾವನ್ನು ವನ್ಯಜೀವಿ ಛಾಯಾಗ್ರಾಹಕ, ಉರಗ ಮತ್ತು ಪರಿಸರ ಪ್ರೇಮಿ ಬಿ.ಶಶಿಕುಮಾರ್ ಸುರಕ್ಷಿತವಾಗಿ ರಕ್ಷಿಸಿ ಅರಣ್ಯಕ್ಕೆ ಬಿಟ್ಟಿದ್ದಾರೆ.

ಶಾಂತಿನಗರ ಬಡಾವಣೆಯಲ್ಲಿರುವ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ, ಹಿರಿಯ ಸಿವಿಲ್ ನ್ಯಾಯಾಧೀಶರಾದ ಸವಿತ.ಪಿ.ಆರ್ ಅವರ ಮನೆಯೊಳಗೆ ಕೆರೆ ಹಾವು ಕಾಣಿಸಿಕೊಂಡಿದೆ. ಇದನ್ನು ನೋಡಿದ ಮನೆಯವರು ಗಾಬರಿಗೊಂಡಿದ್ದರು.

ವಿಷಯ ತಿಳಿದ ಪತ್ರಕರ್ತ ಸಂದೀಪ್ ಕಾಂತಾವರ ತಕ್ಷಣವೇ ಉರಗ ತಜ್ಞ, ಪರಿಸರ ಪ್ರೇಮಿ ಬಿ.ಶಶಿಕುಮಾರ್ ಅವರಿಗೆ ಕರೆ ಮಾಡಿದ್ದಾರೆ. ಸ್ಥಳಕ್ಕೆ ಬಂದ ಶಶಿಕುಮಾರ್ ಸುಮಾರು ಹತ್ತು ಅಡಿ ಉದ್ದದ ಕೆರೆ ಹಾವನ್ನು ಸುರಕ್ಷಿತವಾಗಿ ಹಿಡಿದು ರಕ್ಷಿಸಿದರು.

ನ್ಯಾಯಾಧೀಶರ ಮನೆ ಒಳಗೆ ಹಾವು ನುಗ್ಗಿದ್ದನ್ನ ರಸ್ತೆಯಲ್ಲಿ ತೆರಳುತ್ತಿದ್ದ ಕಾರ್ ಚಾಲಕರೊಬ್ಬರು ಗಮನಿಸಿ ವಿಷಯ ತಿಳಿಸಿದ್ದಾರೆ. ಮೊದಲಿಗೆ ಬೆಡ್ ರೂಮ್ ಹೊಕ್ಕಿದ್ದ ಹಾವು, ರೆಫ್ರಿಜರೇಟರ್,

ಬಳಿಕ ದೇವರ ಕೋಣೆಯೊಳಗೆ ಹೋಗಿ ಸೇರಿಕೊಂಡಿತ್ತು. ಕೆರೆ ಹಾವನ್ನು ಚೀಲದಲ್ಲಿ ಸೆರೆ ಹಿಡಿದ ಶಶಿಕುಮಾರ್ ಅದನ್ನು ರಾಮದೇವರ ಬೆಟ್ಟದ ತಪ್ಪಲಿನ ಕಾಡಿಗೆ ಸುರಕ್ಷಿತವಾಗಿ ಬಿಟ್ಟರು.

ಕೇರೆ ಹಾವು ಅಸಲಿಗೆ ನಿರುಪದ್ರವಿ ಹಾವಾಗಿದ್ದು ರೈತ ಸ್ನೇಹಿಯಾಗಿದೆ. ಇವು ಹೊಲ ಗದ್ದೆಗಳಲ್ಲಿನ ಇಲಿ ಹೆಗ್ಗಣಗಳನ್ನ ಭಕ್ಷಿಸಿ ರೈತರಿಗೆ ಸಹಾಯ ಮಾಡುತ್ತದೆ. ಯಾವುದೇ ಹಾವುಗಳಾಗಲಿ ಅದನ್ನು ಕೊಲ್ಲುವುದು ಸೂಕ್ತವಲ್ಲ . ಹಾವನ್ನು ಕಂಡಲ್ಲಿ ಅವುಗಳನ್ನು ಸಂರಕ್ಷಿಸುವವರನ್ನ ಕರೆದು ಸುರಕ್ಷಿತವಾದ ಜಾಗದಲ್ಲಿ ಬಿಡುವಂತೆ ಶಶಿಕುಮಾರ್ ಅವರು ಮನವಿ ಮಾಡಿದರು.

ಬಮುಲ್ ಸವಲತ್ತುಗಳ ಬಳಸಿಕೊಳ್ಳಿ: ಸತೀಶ್ ಸಲಹೆ

ಉದಯಕಾಲ ನ್ಯೂಸ್, ಯಲಹಂಕ : ಹಾಲು ಉತ್ಪಾದಕ ರೈತರು ಬೆಂಗಳೂರು ಸಹಕಾರ ಹಾಲು ಒಕ್ಕೂಟ(ಬಮೂಲ್) ದಿಂದ ಸಿಗುವ ಸವಲತ್ತುಗಳು ಮತ್ತು ಸೌಲಭ್ಯಗಳ ಪ್ರಯೋಜನ ಪಡೆದುಕೊಳ್ಳಬೇಕು ಎಂದು ಬೆಂಗಳೂರು ಸಹಕಾರ ಹಾಲು ಒಕ್ಕೂಟದ ನಿರ್ದೇಶಕ ಸತೀಶ್ ಕಡತನಮಲೆ ಹಾಲು ಉತ್ಪಾದಕ ರೈತರಿಗೆ ಸಲಹೆ ನೀಡಿದರು.

ಯಲಹಂಕ ಕ್ಷೇತ್ರದ ಕಡತನಮಲೆ ಗ್ರಾಮದಲ್ಲಿ ಬಮೂಲ್ ನಿಂದ ನೀಡಲಾದ 14 ಲಕ್ಷ ವೆಚ್ಚದ ರಸಮೇವು ತಯಾರಿಕಾ ಯಂತ್ರ(ಸೈಲಿಂಗ್ ಮಷೀನ್)ವನ್ನು ಹಾಲು ಉತ್ಪಾದಕರಿಗೆ ಲೋಕಾರ್ಪಣೆ ಮಾಡಿ ಮಾತನಾಡಿದ ಅವರು 'ಯುರೋಪ್ ದೇಶಗಳಲ್ಲಿ ಅಧಿಕ ಹಾಲು ಉತ್ಪಾದನೆ ಮತ್ತು ಹಾಲಿನ ಗುಣಮಟ್ಟ ಹೆಚ್ಚಾಗಿರಲು ಅವರು ರಾಸುಗಳಿಗೆ ನೀಡುವ ರಸಮೇವು ಪ್ರಮುಖ ಕಾರಣವಾಗಿದೆ. ಇದು ದುಬಾರಿ ವೆಚ್ಚ ಆಗಿರುವುದರಿಂದ ಹಾಲು ಉತ್ಪಾದಕರು ವೈಯಕ್ತಿಕವಾಗಿ ಖರೀದಿಸಲು ಕಷ್ಟ ಸಾಧ್ಯವಾಗುತ್ತದೆ ಇದನ್ನು ಮನಗಂಡು ನಮ್ಮ ರೈತರೂ ಸಹ ರಾಸುಗಳಿಗೆ ರಸಮೇವು ನೀಡುವ ಮೂಲಕ ಅಧಿಕ ಹಾಲು ಉತ್ಪಾದನೆ ಮತ್ತು ಹಾಲಿನ ಗುಣಮಟ್ಟ ಸುಧಾರಿಸಿಕೊಳ್ಳಲು ನೆರವಾಗಬೇಕು ಎಂಬ ದಿಸೆಯಲ್ಲಿ ಬಮೂಲ್ ನಿಂದ 14 ಲಕ್ಷ ರು. ವೆಚ್ಚದ ಹೊಸ ಸೈಲಿಂಗ್ ಮಷೀನ್ ಅನ್ನು ನೀಡಲಾಗಿದೆ. ಇದು ಹಾಲು ಉತ್ಪಾದಕರ ಬಹು ದಿನಗಳ ಬೇಡಿಕೆಯು ಸಹ ಆಗಿತ್ತು, ಸೈಲಿಂಗ್ ಮಷೀನ್ ನೀಡುವ ಮೂಲಕ ರೈತರ ಬೇಡಿಕೆಯನ್ನು ಪೂರೈಸಲಾಗಿದೆ,

ಹಾಲು ಉತ್ಪಾದಕ ರೈತರು ಬಮೂಲ್ ನಿಂದ ಸಿಗುವ ಇಂತಹ ಸವಲತ್ತುಗಳು ಮತ್ತು ಸೌಲಭ್ಯಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಇದೇ ಸಂದರ್ಭದಲ್ಲಿ ರಾಜನುಕುಂಟೆ ಶಿಬಿರ ಕಚೇರಿಯ ಉಪವ್ಯವಸ್ಥಾಪಕ ಪ್ರಸನ್ನ ವಿ.ಪಿ., ಅರಕೆರೆ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಕೆ ಆರ್ ತಿಮ್ಮೇಗೌಡ, ಕಡತನಮಲೆ ಹಾಲು ಉತ್ಪಾದಕರ ಸಹಕಾರ ಸಂಘದ ಮಾಜಿ ಅಧ್ಯಕ್ಷ ನಂಜೇಗೌಡ, ವೆಂಕಟೇಶ್ ಮೂರ್ತಿ ಸೇರಿದಂತೆ ಹಾಲು ಉತ್ಪಾದಕ ರೈತರಿದ್ದರು.

ಪಂಜಾಬ ನೆಶನಲ ಬೆಂಕ punjab national bank
(A Government of India Undertaking)
ಎಸ್‌ಎಎಂಬಿ ಚೆನ್ನೈ, 4ನೇ ಮಹಡಿ, ಪಿಎನ್‌ಬಿ ಟವರ್ಸ್, 46-49/ ನಂ.46-49, ರಾಯಪೇಟ್ಟ ಹೈ ರೋಡ್, ಚೆನ್ನೈ-14.
ದೂರವಾಣಿ: 28112261-90; ಇಮೇಲ್: zs8341@pnb.bank.in

ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಮಾರಾಟ ಪ್ರಕಟಣೆ

ಸ್ಥಿರ ಆಸ್ತಿಗಳ ಮಾರಾಟಕ್ಕಾಗಿ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು 2002 ರ ನಿಯಮ 8(6) ಮತ್ತು 9(1) ರ ಅಡಿಯಲ್ಲಿ ಸಾರ್ವಜನಿಕರಿಗೆ ಇ-ಹರಾಜು ಮಾರಾಟ ನೋಟಿಸ್

ಸಾರ್ವಜನಿಕರಿಗೆ ಸಾಮಾನ್ಯವಾಗಿ ಮತ್ತು ನಿರ್ದಿಷ್ಟವಾಗಿ ಸಾಲಗಾರ(ರು) ಮತ್ತು ಅಡಮಾನದಾರ(ರು)ಗೆ ಈ ಮೂಲಕ ನೋಟಿಸ್ ನೀಡುವುದೇನೆಂದರೆ, ಅಡಮಾನ/ಚಾರ್ಜ್ ಮಾಡಲಾದ ಕೆಳಕಂಡ ಸ್ಥಿರ ಆಸ್ತಿಗಳ ರಚನಾತ್ಮಕ/ಸಾಂಕೇತಿಕ ಸ್ವಾಧೀನವನ್ನು ಪಂಜಾಬ್ ನ್ಯಾಷನಲ್ ಬ್ಯಾಂಕ್‌ನ ಅಧಿಕೃತ ಅಧಿಕಾರಿ, ಭದ್ರತಾ ಸಾ